ಶ್ರೀ ಎಸ್. ಬಂಗಾರಪ್ಪ.—ನಾನು ಮಾಟಾಳ್ ನಾಗರಾಜ್‌ರವರು ಎಂಬುದಕ್ಕೆ ರಾಯರು ಎಂದೆ. ರಾಯರು ಎಂದರೆ ತುಂಬಾ ಗೌರವದ ವಿಚಾರ ಅಷ್ಟೆ.

ಶ್ರೀ ಹೆಚ್. ವಿಶ್ವನಾಥಯ್ಯ.—ಅದಕ್ಕೇ ಅವರು ಬೇಡ ಎಂದು ಹೇಳುತ್ತಿದ್ದಾರೆ. (ನಗು)

ಅಧ್ಯಕ್ಷರು.—ಅವರು ಹೇಳುತ್ತಾರೆ, ನನಗೆ ಹೇಳುವುದಕ್ಕೆ ಸ್ವಲ್ಪ ಅವಕಾಶ ಕೊಟ್ಟುಬಿಡಿ ನಿಮ್ಮ ಗೌರವ ಅದೆಲ್ಲಾ ಬೇಡ ಎಂದು. (ನಗು)

ಶ್ರೀ ಮಾಟಾಳ್ ನಾಗರಾಜ್.—ಧನ್ಯವಾದಗಳು ಸ್ವಾಮಿ ತಮಗೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕ ವಿಷಯದ ಪ್ರಾಮುಖ್ಯತೆಯನ್ನು ನಾನು ಅಲ್ಲಗಳೆಯುವುದಿಲ್ಲ. ಆದರೆ ಪ್ರಸ್ತಾಪ ಮಾಡತಕ್ಕ ವಿಧಿ ವಿಧಾನ ಇಲ್ಲವೆ ಎಂಬುದನ್ನು ಅವರು ಅನಿವಾರ್ಯವಾಗಿ ಗಮನಿಸಬೇಕಾಗುತ್ತದೆ. ವಿಷಯಗಳ ಪ್ರಸ್ತಾಪಕ್ಕೆ ನಿಯಮ ೬೩ಳ ಹಾಗೂ ಇತರೆ ನಿಯಮಗಳು ಇವೆ. ಅದು ಏನೇ ಇದ್ದರೂ ನಾವು ಒಂದು ವಿಷಯ ವಿಶ್ಲೇಷಿದ ಮೇಲೆ ನಾವು ಅದಕ್ಕೆ ಇಲಾಖೆಯಿಂದ ಉತ್ತರ ತಿಳಿದು ಇಲ್ಲಿ ಹೇಳಬೇಕಾಗುತ್ತದೆ. ನಿಯಮದ ಪ್ರಕಾರ ಅವರು ವಿಷಯವನ್ನು ಎತ್ತಿದರೆ ನಾವೂ ಉತ್ತರ ತರಿಸುವುದಕ್ಕೆ ಅನುವು ಮಾಡಿಕೊಳ್ಳಬಹುದು ಇವತ್ತು ಹಕ್ಕು ನಮ್ಮ ಒಬ್ಬರದ್ದೇ ಆಗುವುದಿಲ್ಲ. ಇವತ್ತು ನಿಮ್ಮ ಮೂಲಕ ಪ್ರಾರಂಭವಾದರೆ ಆ ಹಕ್ಕು ಎಲ್ಲಾ ಸದಸ್ಯರಿಗೂ ಕೂಡ ಬರುತ್ತದೆ. ಆದ್ದರಿಂದ ತಮ ಮೂಲಕ ನಾನು ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ದಯವಿಟ್ಟು ಅವರು ಅದನ್ನು ಬಿಡಿಸಿ ಕಳುಹಿಸಿಕೊಡಲಿ ಇವತ್ತು ಅವರು ಒಂದು ಸಭೆಯನ್ನು ಕರೆದು ಈ ವಿಷಯದ ಬಗ್ಗೆ ವಿಚಾರ ಮಾಡಿ ಎಂದು ಹೇಳಿದರು. ಇದರ ಬಗ್ಗೆ ತಾವೇ ವಿಚಾರ ಮಾಡಿ. ಇವತ್ತು ರಾಜ್ಯದಲ್ಲಿ ಆದೊಂದೇ ತಾಲ್ಲೂಕು ಇಷ್ಟ. ಇವತ್ತು ಅಲ್ಲಿ ಮಾಡಿದರೆ ನಾಳೆ ಎಲ್ಲಾ ತಾಲ್ಲೂಕುಗಳಲ್ಲಿ ಸಭೆ ಮಾಡಬೇಕೆಂದರೆ ಏನಾದೀತು ಎಂಬುದನ್ನು ಮನಗಾಣಬೇಕು. ದಯವಿಟ್ಟು ಮಾನ್ಯ ಸದಸ್ಯರು ಬರೆದುಕೊಡಲಿ. ನಾನು ಹೇಳಿಕೆ ಕೊಡುವುದಕ್ಕೆ ತಯಾರು ಇದ್ದೇನೆ. ಆದರ ಬಗ್ಗೆ ತಮಗೆ ಅನುಮಾನ ಬೇಡ.

ಗಮನ ಸೆಳೆಯುವ ಸೂಚನೆ

ರಾಜ್ಯದಲ್ಲಿ ಹರಡುತ್ತಿರುವ ಏಡ್ಸ್ ರೋಗದ ಬಗ್ಗೆ

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಹರಡುತ್ತಿರುವ ಏಡ್ಸ್ ರೋಗದ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಈ ಕೆಳಕಂಡ ಹೇಳಿಕೆಯನ್ನು ನಾನು ಕೊಡಬಯಸುತ್ತೇನೆ.

ರಾಜ್ಯದಲ್ಲಿ ಈವರೆಗೆ ೬ ಏಡ್ಸ್ ರೋಗದ ಪ್ರಕರಣಗಳು ವರದಿಯಾಗಿವೆ.

೧೯೮೮—೪

೧೯೮೯—೩

೧೯೯೦—೩

(೩೧-೧೦-೧೯೯೦ ರವರೆಗೆ)

ರಾಜ್ಯದಲ್ಲಿ ಮೂರು ತಪಾಸಣಾ ಕೇಂದ್ರಗಳು ಕೇಂದ್ರ ಸರ್ಕಾರದ ಸಹಾಯದಿಂದ ಸ್ಥಾಪಿತವಾಗಿವೆ. ಬೆಂಗಳೂರಿನಲ್ಲಿ ಎರಡು ಸಂಸ್ಥೆಗಳು ವಿಕ್ಟೋರಿಯಾ ಆಸ್ಪತ್ರೆ ಮತ್ತು ಬೌರಿಂಗ್ ಆಸ್ಪತ್ರೆ ಯಲ್ಲಿ ಕಾರ್ಯ ನಿರತವಾಗಿವೆ. ಹುಬ್ಬಳ್ಳಿ ಕೆ.ಎಂ.ಸಿ. ಆಸ್ಪತ್ರೆಯಲ್ಲಿ ಒಂದು ತಪಾಸಣಾ ಕೇಂದ್ರ ಸ್ಥಾಪಿತವಾಗಿದೆ. ಈ ಕೇಂದ್ರಗಳ ಜೊತೆಗೆ ಹೆಚ್ ಎಸ್ ಐ.ಎಸ್.. ಸರ್ಕಾರಿ ಗೋಷಾ ಆಸ್ಪತ್ರೆ ಹಾಗೂ, ಮಲ್ಲೇಶ್ವರಂ ಕೆ. ಸಿ. ಜನರಲ್ ಆಸ್ಪತ್ರೆಗೂ ಮತ್ತು ಕಿದ್ವಾಯ್ ಕ್ಯಾನ್ಸರ್ ಆಸ್ಪತ್ರೆಗೂ ಏಡ್ಸ್ ರೋಗ ತಪಾಸಣಾ ಉಪಕರಣಗಳು ಭಾರತ ಸರ್ಕಾರದಿಂದ ಉಚಿತವಾಗಿ ಸರಬರಾಜು ಮಾಡಲ್ಪಟ್ಟಿರುತ್ತದೆ.

ಈ ರೋಗಕ್ಕೆ ನಿಶ್ಚಿತವಾದ ಚಿಕಿತ್ಸೆ ಇನ್ನೂ ಗೊತ್ತಿಲ್ಲ. ರೋಗ ಲಕ್ಷಣಗಳಿಗೆ ಅನುಸಾರವಾಗಿ ಚಿಕಿತ್ಸೆಯನ್ನು ಕೊಡಲಾಗುವುದು. ಈ ಕಾರ್ಯಕ್ರಮಕ್ಕೆ ಅವಶ್ಯಕವಿರುವ ಪೂರೈಕೆ ಮತ್ತು ನೆರವನ್ನು ಒದಗಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಿರಂತರವಾಗಿ ಪ್ರಯತ್ನಿಸುತ್ತಿವೆ. ರೋಗಿಗಳನ್ನು

ಪತ್ತೆ ಹಚ್ಚುವುದು, ರೋಗದ ಬಗ್ಗೆ ಜಾಗೃತಿ ಮೂಡಿಸುವುದು, ರಕ್ತ ಸಂಗ್ರಹಾಲಯಗಳಿಂದ ರಕ್ತ ಪಡೆದು ಪರೀಕ್ಷಿಸುವುದು, ರಕ್ತ ಮತ್ತು ರಕ್ತದಿಂದ ತಯಾರಿಸಿದ ಪೋಷಕ ಚಿಕಿತ್ಸಾ ವಸ್ತುಗಳನ್ನು ಪರೀಕ್ಷಿಸಿ ಸಂಶಯ ಬಂದಲ್ಲಿ ಅದರ ಉಪಯೋಗಗಳನ್ನು ನಿಷೇಧಿಸುವ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ.

ಹೆಚ್ಚಿನ ಹಾನಿಕರ ಮತ್ತು ಸಂಶಯ ಪೀಡಿತ ವ್ಯಕ್ತಿಗಳಿಂದ ರಕ್ತದ ಮಾದರಿಗಳನ್ನು ಪಡೆದು ಪರೀಕ್ಷೆಯನ್ನು ಮಾಡಲಾಗುತ್ತಿದೆ. ವಿದೇಶಿ ವಿದ್ಯಾರ್ಥಿಗಳಿಂದ ಕಡ್ಡಾಯವಾಗಿ ರಕ್ತ ಮಾದರಿಗಳನ್ನು ಪಡೆದು ಅವರಲ್ಲಿ ಏಡ್ಸ್ ರೋಗ ಪತ್ತೆಯಾದಲ್ಲಿ ಅವರನ್ನು ಕೂಡಲೇ ವಾಪಸ್ಸು ಕಳುಹಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ.

ಅವಂಗಿರುವ ರೋಗ ಲಕ್ಷಣಗಳನ್ನು ಕಂಡುಕೊಂಡು ಚಿಕಿತ್ಸೆಯನ್ನು ಒದಗಿಸಿ ಅವರು ಜೀವಂತವಾಗಿ ಬಹುಕಾಲ ಉಳಿಯುವಂತೆ ಮಾಡುವುದು ಹೆಚ್ಚಿನ ವಿಷಯವಾಗಿದೆ ಎಂದು ಗಮನಿಸಬೇಕಾದ ಅಂಶವಾಗಿದೆ.

ಉತ್ತಮ ನೈತಿಕವಾದ ಮಾರ್ಗದರ್ಶನವನ್ನು ಇರಿಸಿಕೊಳ್ಳುವಂತೆ ಪ್ರಚಾರ ಮಾಧ್ಯಮ ಕಾರ್ಯಕ್ರಮವನ್ನು ಮಾಡಲಾಗುತ್ತಿದೆ.

† ಶ್ರೀ ವಲ್ಲಾರಿಗೌಡ ಎಸ್. ಪಾಟೀಲ್ —ಮಾನ್ಯ ಅಧ್ಯಕ್ಷರೇ, ಇದು ಒಂದು ಭಯಂಕರವಾದ ರೋಗ. ಮಾನ್ಯ ಸಚಿವರು ಕೊಟ್ಟಿರುವ ಹೇಳಿಕೆ ಪ್ರಕಾರ ಇದರ ಸಂಖ್ಯೆ ೧೯೮೮ರಲ್ಲಿ ಕೇವಲ ೪ ಇದ್ದದ್ದು ೧೯೯೦ಕ್ಕೆ ಇದು ೩೩೬ಕ್ಕೆ ಏರಿದೆ. ಈ ಸಂಖ್ಯೆ ೪ ಇದ್ದಾಗಲೇ ನಾವು ಈ ಬಗ್ಗೆ ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತು. ಈಗ ಸಂಖ್ಯೆ ೩೩೬ಕ್ಕೆ ಮುಟ್ಟಿದ್ದು. ಒಟ್ಟಿನಲ್ಲಿ ರಾಜ್ಯದಲ್ಲಿ ೬೯ ಜನರಿಗೆ ಈ ರೋಗ ಹರಡಿದೆ ಎಂದು ಉತ್ತರ ಬಂದಿದೆ. ಇವತ್ತು ರಕ್ತಕೇಂದ್ರಗಳಲ್ಲಿ ಹೆಚ್ಚಿನಪ್ರಮಾಣದಲ್ಲಿ ಈ ರೋಗಗಳು ಹಬ್ಬುತಕ್ಕದ್ದು ಇದೆ. ನಾನು ನೋಡಿದ ಪ್ರಕಾರ ರಕ್ತ ಸಂಗ್ರಹಣಾ ಸಂಸ್ಥೆಗಳು ಯಾವ ಒಂದು ಮಟ್ಟದಲ್ಲಿ ಇರಬೇಕೋ ಆ ಮಟ್ಟದಲ್ಲಿ ಈ ದಿವಸ ರಾಜ್ಯದಲ್ಲಿ ಇಲ್ಲ. ಇದಕ್ಕೆ ತಕ್ಕ ಯೋಗ್ಯವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದರ ಜೊತೆಗೆ ವಿದೇಶದಿಂದ ಬಂದಂತಹ ವಿದ್ಯಾರ್ಥಿಗಳನ್ನು ನಾವು ತಪಾಸಣೆಗೆ ಒಳಪಡಿಸುತ್ತೇವೆ ಹಾಗೂ ಅಂತಹವರಲ್ಲಿ ಇದು ಂಡು ಬಂದರೆ ವಾಪಸು ಕಳಿಸುತ್ತೇವೆಂದು ಹೇಳಿದ್ದೀರಿ : ಹಾಗಿದ್ದರೆ ಎಷ್ಟು ಜನರನ್ನು ತಪಾಸಣೆ ಮಾಡಿದ್ದೀರಿ ಎಷ್ಟು ಜನರನ್ನು ವಾಪಸು ಕಳಿಸಿದ್ದೀರಿ ಎಂಬುದನ್ನು ತಿಳಿಸಬೇಕು. ಸುಮಾರು ೬೯ ಜನ ರೋಗಿಗಳಿಗೆ ಸರಕಾರದ ವತಿಯಿಂದ ನಿರ್ದಿಷ್ಟವಾದಂತಹ ಮಾಸಾಶನ ಕೊಡತಕ್ಕಂತಹ ಕಾರ್ಯಕ್ರಮ ಏನಾದರು ಇದೆಯೆ ? ಇದು ಬಹಳ ಭಯಂಕರವಾದ ರೋಗ. ಡಾಕ್ಟರ್‌ಗಳೂ ಕೂಡ ಇಂತಹ ರೋಗಿಗಳನ್ನು ಮುಟ್ಟುವುದಿಲ್ಲ. ಇದರಿಂದಾಗಿ ಅವರಿಗೆ ಮಾನಸಿಕ ಹಿಂಸೆಯಾಗುತ್ತದೆ. ಇವರಿಗೆ ಹಾಸ್ಪಿಟಲ್ ವ್ಯವಸ್ಥೆಯನ್ನು ಮಾಡದೇ ಹೋದರೆ ಈ ಭಯಂಕರ ರೋಗಕ್ಕೆ ಒಳಪಟ್ಟಂತಹ ಜನ ಏನಿಮಾಡ್ತಾರೆ, ಇವರು ಮಾನಸಿಕವಾಗಿ ನೋವನ್ನು ಅನುಭವಿಸಬೇಕಾಗುತ್ತದೆ. ಈಗ ಆಸ್ಪತ್ರೆಗಳಲ್ಲಿ ನೀಡಲ್ಸ್ ಅನ್ನು ಏನು ಉಪಯೋಗ ಮಾಡುತ್ತಾರೆ, ಅದರಿಂದ ಕೂಡ ಇದು ಹಬ್ಬುತಕ್ಕಂತಹ ಸಂದರ್ಭ ಮತ್ತು ಸೊಳ್ಳೆಗಳಿಂದ ಹಬ್ಬುತಕ್ಕಂತಹ ಸಂದರ್ಭ ಒದಗಿ ಬರಬಹುದು. ಸೊಳ್ಳೆಗಳಿಂದ ಏನಾದರೂ ಇದು ಬರುತ್ತದೆಯೇ ಎಂಬ ಬಗ್ಗೆ ಸಂಶೋಧನೆಯಾಗಿಲ್ಲ ; ಇದರ ಬಗ್ಗೆ ಯಾವ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ. ಕೆ.ಎಂ.ಸಿ ನಲ್ಲಿಯಾಗಲೀ, ಬೆಂಗಳೂರಿನಲ್ಲಾಗಲೀ ಇಲ್ಲವೇ ಉಳಿದ ಕಡೆಯಲ್ಲಾಗಲೀ ಇದರ ಬಗ್ಗೆ ಸರಿಯಾದ ಚಿಕಿತ್ಸೆ ಆಗಬೇಕಾಗುತ್ತದೆ. ಮೂಲತಃ ನಮ್ಮ ಸಮಾಜದಲ್ಲಿರತಕ್ಕಂತ ದೇವದಾಸಿ ಪದ್ಧತಿ ಏನು ಇದೆ, ಇದರಿಂದಾಗಿ ಇದು ಮೊಟ್ಟ ಮೊದಲನೆಯದಾಗಿ ಸಮಾಜತ್ತಿಯಲ್ಲಿ ಪ್ರಾರಂಭವಾಯಿತು. ಅಲ್ಲಿಂದ ಬೇರೆ ಕಡೆಗೂ ಹರಡಿ ಇದರಿಂದ ೬೮ ಜನ ರೋಗಿಗಳನ್ನು ಕರ್ನಾಟಕದಲ್ಲಿ ನೋಡುತ್ತಿದ್ದೇವೆ. ಇದಕ್ಕಾಗಿ ಏನುಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ. ಡಾಕ್ಟರ್‌ಗಳೂ ಕೂಡ ಈ ರೋಗವಿದೆ ಎಂದ ಕೂಡಲೇ ಯೋಗ್ಯವಾದ ಚಿಕಿತ್ಸೆಯನ್ನು ಕೊಡತಕ್ಕಂತಹ ಧೈರ್ಯ ಮಾಡುವುದಿಲ್ಲ. ಇದು ಭಯಂಕರ ರೋಗವಾಗಿರುತ್ತದೆ ಇದರಿಂದ ಅವರಿಗೂ ಕೂಡ ಮಾನಸಿಕ ತೊಂದರೆಯಾಗಬಹುದು. ಇವರಿಗೆ ಮಾನಸಿಕ ನೆಮ್ಮದಿಯನ್ನು ಕೊಡಲಿಕ್ಕೆ ಆರೋಗ್ಯ ಇಲಾಖೆಯಿಂದ ಯಾವ ಯಾವ ಕಾರ್ಯಕ್ರಮ ತೆಗೆದುಕೊಳ್ಳುತ್ತೀರೆಂದು ಕೇಳಬಯಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ವಿಲಕ್ಷಣವಾದ ರೋಗ ಏನು ಇದೆ, ಇದಕ್ಕೆ ಇನ್ನೂ ನಿಶ್ಚಿತವಾದ ಚಿಕಿತ್ಸೆ ಏನು ಎಂದು ಗೊತ್ತಾಗಿಲ್ಲ. ಇವರಲ್ಲಿ ಫಾರಿನ್‌ಗೆ ಒಬ್ಬರನ್ನು ವಾಪಸು ಕಳಿಸ

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ಲಾಗಿದೆ, ತಮಗೆ ಗೊತ್ತಿರುವ ಹಾಗೆ ರಕ್ತದಿಂದ ಬರತಕ್ಕಂತಹ ಒಂದು ರೋಗ ಇದು. ಅದಕ್ಕಾಗಿ ರಕ್ತವನ್ನು ಸಂಗ್ರಹ ಮಾಡುವಾಗ ಒಳ್ಳೆಯ ಸಿಸ್ಟಂ ಅನ್ನು ಅನುಸರಿಸಿ ವಿಚಾರಣೆ ಮಾಡಿ ಪರೀಕ್ಷೆ ಮಾಡಿ ರಕ್ತ ಸಂಗ್ರಹಣೆ ಮಾಡುತ್ತಿದ್ದೇನೆ ನಾನು ಮೊನ್ನೆ ಹೇಳಿದಂತೆ ರಕ್ತ ಸಂಗ್ರಹಣೆ ಮಾಡಾವುದೇ ಇತ್ತೀಚೆಗೆ ಕಷ್ಟಕ್ಕೆ ಬಂದಿದೆ. ರಕ್ತ ಸಂಗ್ರಹಣೆ ಮಾಡುವಾಗ ಸುಧಾರಿಸಿದ ಕ್ರಮದಲ್ಲಿ ಮಾಡುತ್ತಿದ್ದೇವೆ. ಇನ್ನು ಇಂತಹ ರೋಗಿಗಳಿಗೆ ಹಣದ ಸಹಾಯ ಮಾಡುವ ವಿಚಾರ ಸಧ್ಯಕ್ಕೆ ನಮ್ಮ ಮುಂದಿಲ್ಲ. ಏಕೆಂದರೆ ೮ನೇ ಯೋಜನೆಯಲ್ಲಿ ಏಡ್ಸ್ ನಿಯಂತ್ರಣಕ್ಕೆಂದೂ ೧೦ ಲಕ್ಷ ರೂಪಾಯಿ ಒದಗಿಸಿದೆ. ಈ ವರ್ಷ ಈ ಕಾರ್ಯಕ್ರಮಕ್ಕೆ ೧ ಲಕ್ಷ ರೂಪಾಯಿ ಒದಗಿಸಲಾಗಿದೆ. ಇದರ ಅಂಗವಾಗಿ ಪ್ರಚಾರ ಪಾಥ್ಯಮಗಳಿಗೆ ೮೮ ರಿಂದ ಇದುವರೆಗೆ ಸುಮಾರು ೧ ಲಕ್ಷ ರೂಪಾಯಿ ಖರ್ಚು ಮಾಡಲಾಗಿದೆ. ಭಿತ್ತಿ ಪತ್ರಗಳನ್ನು ಕರಪತ್ರಗಳನ್ನು ಚಲನಚಿತ್ರ ಪತ್ರಿಕೆಗಳಿಗೂ ಕೊಟ್ಟು ಇದನ್ನು ವಿತರಣೆ ಮಾಡುವುದಕ್ಕೆ ಏರ್ಪಾಡು ಮಾಡಲಾಗಿದೆ.

ಶ್ರೀ ಎಂ. ಎಸ್. ಪಾಟೀಲ್.—ಸೊಳ್ಳೆ ಕಡಿದಾಗ ಈ ರೋಗ ಹಬ್ಬುವ ಸಾಧ್ಯತೆ ಇದೆಯೇ ಎಂಬ ಬಗ್ಗೆ ಸಂಶೋಧನೆ ಮಾಡಬೇಕು ಅದರ ಜೊತೆಗೆ ಈ ರೋಗಿಗಳು ಏನು ಇದ್ದಾರೆ ಇವರು ಬಹಳ ಕಡು ಬಡವರಿದ್ದಾರೆ. ಇವರಿಗೆ ಮಾಸಾಶನ ಕೊಡುವ ಕಾರ್ಯಕ್ರಮವನ್ನು ತೆಗೆದುಕೊಳ್ಳದಿದ್ದರೆ ಅವರಂ ಜೀವನ ಮಾಡುವುದು ಬಹಳ ಕಷ್ಟವಾಗುತ್ತದೆ. ಇದನ್ನು ಅನಿವಾರ್ಯವಾಗಿ ಮಾಡಬೇಕು. ಇದರ ಬಗ್ಗೆ ಸರಕಾರ ವಿಶೇಷವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂ ಎಂದು ಕಳಕಳಿಯಿಂದ ವಿನಂತಿ ಮಾಡುತ್ತೇನೆ. ಈ ನಿರ್ಧಿಷ್ಟವಾದ ಪರಿಸ್ಥಿತಿಯಲ್ಲಿ ಅವರು ಜೀವನ ಮಾಡಬೇಕಾಗುತ್ತದೆ. ಅದಕ್ಕಾಗಿ ಅವರಿಗೆ ಮಾಸಾಶನ ಕೊಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರೆಂದು ಕೇಳುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಪರೀಕ್ಷೆ ಮಾಡಲ್ಪಟ್ಟಿದೆ ಸೊಳ್ಳೆಯಿಂದ ಈ ರೋಗ ಬರುವುದಿಲ್ಲವೆಂದು ನಿಶ್ಚಿತವಾಗಿ ಗೊತ್ತಾಗಿದೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರ ತಿಳುವಳಿಕೆ ಸರಿಯಾಗಿಲ್ಲ ವೆಂದು ನನ್ನ ಭಾವನೆ. ಇವರಿಗೆ ಮಾಸಾಶನ ಕೊಡುವುದು ಏನು ಇದೆ ಇದರ ಬಗ್ಗೆ ನಮ್ಮ ಕಾರ್ಯಕ್ರಮ ಇಲ್ಲ. ರೋಗ ಬಂದವರು ಹೇಳಿಕೊಳ್ಳುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ, ಹೇಳಿಕೊಂಡಂತಹವರಿಗೆ ಕೂರೇಟೀವ್ ಟ್ರೈಫ್ ಆಫ್ ಮೆಡಿಸನ್ ಅನ್ನು ಕೊಡಲಾಗುತ್ತಿದೆ. ಇನ್ನು ಪ್ರಿವೆಂಟೀವ್ ಮೆಡಿಸನ್ಸ್ ಕೊಡಬೇಕೆಂದರೆ ಯಾವುದನ್ನು ಕೊಡಬೇಕೆಂದು ಇನ್ನೂ ತಿಳುವಳಿಕೆಗೆ ಬಂದಿಲ್ಲ. ಆದ್ದರಿಂದ ಇಂತಹವರಿಗೆ ಮಾಸಾಶನ ಕೊಡುವುದು ಕಷ್ಟವಾಗುತ್ತದೆ.

೧೧-೦೦ ಎ. ಎಂ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೆ, ಒಂದು ಮಾಹಿತಿಯನ್ನು ಹೇಳುವುದಕ್ಕೆ ತಾವು ಅನುವು ಮಾಡಿಕೊಡಬೇಕೆಂದು ಪ್ರಾರ್ಥನೆ. ಮೊನ್ನೆ ಮಾನ್ಯ ಸದಸ್ಯರಾದ ಗುಜ್ಜಾಲ್ ಹನುಮಂತಪ್ಪನವರು ಕಾಯಿಲೆ ಇದ್ದಾಗ ಮತ್ತು ಅವರ ಟ್ರೀಟ್‌ಮೆಂಟ್ ಬಗ್ಗೆ ನಮ್ಮ ಸದಸ್ಯರು ಹೇಳಿದ್ದರು ಅದನ್ನು ನಾನು ವಿಚಾರಿಸಿ ಹೇಳುತ್ತೇನೆಂದು ಹೇಳಿದ್ದೆ. ಅದರ ಬಗ್ಗೆ ಒಂದು ಹೇಳಿಕೆಯನ್ನು ಓದುವುದಕ್ಕೆ ತಮ್ಮ ಅಪ್ಪಣೆಯನ್ನು ಕೇಳುತ್ತಿದ್ದೇನೆ.

This is to inform you that Sri Gujjal Hanumanthappa, M. L. A., from Hospet was admitted to this Hospital in a serious condition due to "Status Asthmaticus" on Monday at 9.40 p. m. and he was immediately given treatment and admitted. As per his desire Dr. L. Chandramma, Professor of Medicine was called in as she had attended on him earlier, and treatment continued under her care. Subsequently, his condition improved. Dr. B. M. Jayaram, Prof. & Head of the Department of Medicine also saw him on 13th and gave his valuable suggestions regarding the treatment.

However, he collapsed suddenly and died due to Massive Heart attack at 9.40 p. m. on 13th Tuesday. The relatives were informed immediately and efforts were made to contact the higher authorities immediately to convey this information. However, due to faulty functioning of telephones, only Director of Medical Education and Sri J. H. Patel, President of State Janata Dal could be contacted.

There is no provision to transport the dead body in the Ambulance Van from this Hospital to Hospet.

"In continuation of the report filed already about the subject noted above I want to inform you that.—

1. Adequate stock of formalin was available in the Hospita and also in the mortuary on 14th November, 1990.

2. The physician had opined that as the relatives told him that they have planned to cremate the body on 14th itself the formalin treatment is not required, as the body will not deteriorate, since the death is duea to natural causes. The death due to unnatural causes like poisoning, accident etc., will deteriorate early, Also the formalin treated body will emit strong pungent and unpleasant fumes around.

3. Preservation is done in the Victoria Hospital mortuary with the help of the Anatomy department of Bangalore Medical College.

4. However, the usual formality of applying the formalin to the body at the time of handing over was done.

5. Resident Medical Officer who was available all the time says that he told the attendant that the formalin is available in the Hospital.

ಆಲ್ಲಿ ಫಾರ್‌ಮಾಲಿನ್ ಇರಲಿಲ್ಲವೆಂದು ತಮಗೆ ತಪ್ಪು ಮಾಹಿತಿಯನ್ನು ಯಾರೋ ಕೊಟ್ಟಿದ್ದಾರೆ.

ಶ್ರೀ ಎಸ್. ಹೆಚ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಅವರ ಹೆಂಡತಿಗೆ ಏನೇನೂ ಗೊತ್ತಿಲ್ಲ. ಅವರಂ ವಿಧಾನಸೌಧ ನೋಡಿಲ್ಲ. ಅವರಿಗೆ ಶಾಸಕರ ಭವನ ಗೊತ್ತಿಲ್ಲ. ಡಿ. ಬಿ ಚಂದ್ರೇಗೌಡರು ಯಾರೆಂದು ಗೊತ್ತಿಲ್ಲ. ಆಲ್ಲಿನ ಡಾಕ್ಟರುಗಳಿಗೆ ಏಂತರ್ತು ಸಿಬ್ಬಂದಿಗೆ ಹಣವನ್ನು ಯಾವ ಪ್ರಕಾರ ಕಟ್ಟಬೇಕೆನ್ನುವುದು ಗೊತ್ತಿಲ್ಲ. ಒಬ್ಬ ಶಾಸಕರು ಅದನ್ನು ಕಟ್ಟುವ ಪರಿಸ್ಥಿತಿ ಬಂತು.

ಶ್ರೀ ಟಿ. ಎಂ. ಪಂಜುನಾಥ್.—ಮಾನ್ಯ ಅಧ್ಯಕ್ಷರೆ, ಆಲ್ಲಿ ಏನಾಗಿದೆ ಎಂಬುದನ್ನು ನನ್ನ ತಿಳಿದಮಟ್ಟಿಗೆ ಹೇಳುತ್ತೇನೆ. ನನಗೆ ತಿಳಿದಂತೆ ಗಂಜ್ಞಾಲಹನುಮಂತಪ್ಪನವರು ಆಸ್ಪತ್ರೆಯಲ್ಲಿ ಆ ಆಸ್ಪತ್ರೆಯಲ್ಲಿ ಶ್ಲೇಷ್ಮ ಅಂದರೆ ಕಫ ತೆಗೆಯುವ ಯಂತ್ರ ಸರಿಯಾಗಿ ವರ್ಕ್ ಮಾಡಲಿಲ್ಲ ಇದು ನನಗೆ ಗೊತ್ತಿರತಕ್ಕ ವಿಚಾರ, ಕೆಲವು ಡಾಕ್ಟರುಗಳು ಹೇಳಿರತಕ್ಕ ವಿಚಾರ. ಅವರ ಆನಾರೋಗ್ಯಕ್ಕೆ ಸರಿಯಾದ ಟ್ರೀಟ್‌ಮೆಂಟ್ ಇಲ್ಲದೆ ಕಾರಣ ಅವರು ಸಾಯಲಿಲಂ ಕಾರಣವೆಂದು ನನಗೆ ತಿಳಿದಿದೆ. ಅದನ್ನು ಆರೋಗ್ಯ ಮಂತ್ರಿಗಳ ಗಮನಕ್ಕೆ ತಮ್ಮ ಮೂಲಕ ತರಂತ್ತಿದ್ದೇನೆ.

ಶ್ರೀಮಂತಿ ಕೆ. ಎಸ್. ನಾಗರತ್ನಮ್ಮ.—ಅದನ್ನು ವಿಚಾರಿಸುತ್ತೇನೆ.

ಗೈರು ಹಾಜರಿಗೆ ಅನುಮತಿ ಕೋರಿಕೆ

ಅಧ್ಯಕ್ಷರು.—ವಿಧಾನಸಭಾ ಸದಸ್ಯರಾದ ಪ್ರಭಾಕರ್ ಎಸ್. ರಾಣಿಯವರು ಆನಾರೋಗ್ಯದ ಸ್ಥಿತಿಯಿಂದಾಗಿ ದಿನಾಂಕ ೨೦-೧೧-೯೦ ರಿಂದ ೨೭-೧೧-೯೦ರವರೆಗೆ ಸದನಕ್ಕೆ ಹಾಜರಾಗಲು ಸಾಧ್ಯವಾಗುವುದಿಲ್ಲವೆಂದು ಪತ್ರ ಬರೆದಿದ್ದಾರೆ.

"ಶ್ರೀ ಪ್ರಭಾಕರ್ ಎಸ್. ರಾಣಿಯವರ ಮೇಲೆ ಸೂಚಿಸಿದ ಅವಧಿಯಲ್ಲಿ ಸದನಕ್ಕೆ ಗೈರುಹಾಜರಾಗಲು ಅನುಮತಿಯನ್ನು ಕೊಡಬೇಕೆಂದು ಸದನವು ಅಪೇಕ್ಷಿಸುತ್ತದೆಯೇ ?

(ಯಾವ ಸದಸ್ಯರೂ ವಿರೋಧ ವ್ಯಕ್ತಪಡಿಸಲಿಲ್ಲ)